ವಾರದ ಪತ್ರ

## ಉತ್ತರ ನಿಗೂಢ

ಬಹುತೇಕ ಧಾರಾವಾಹಿಗಳಲ್ಲಿ ಕಾನೂನಿನ ಅಂಶಗಳನ್ನು ಪರಿಗಣಿಸುತ್ತಲೇ ಇಲ್ಲ. ಕ್ರಿಮಿನಲ್ ಪ್ರಕರಣಗಳಲ್ಲಿ ಬಂಧಿತ ಆರೋಪಿಯನ್ನು ಆತನ ಪ್ರೇಯಸಿ ಸತ್ತಳೆಂದು ಮೃತ ಸ್ಥಳಕ್ಕೆ ಕರೆದೊಯ್ಯಲು ಅವಕಾಶ ಎಲ್ಲಿದೆ? ಸಂಪ್ರದಾಯದಂತೆ ಮದುವೆಯಾಗಿ ಅನ್ಯೋನ್ಯವಾಗಿ ಇದ್ದೂ ಹಳೆಯ ಪ್ರೇಯಸಿಗಾಗಿ ಹಂಬಲಿಸುವುದು ಎಷ್ಟು ಸರಿ?

ಇದೆಲ್ಲವೂ ಕಲರ್ಸ್ ಕನ್ನಡದ 'ಗಿಣಿರಾಮ' ಧಾರಾವಾಹಿಯಲ್ಲಿ ಮಾತ್ರ ಸಾಧ್ಯ. ಇದರಲ್ಲಿ ಸತ್ತುಹೋದವರೂ ಅದು ಹೇಗೆ ಬದುಕಿ ಬರುತ್ತಾರೆ ಎನ್ನುವುದು ಸೋಜಿಗ. ಮಹತಿಯ ಪ್ರಿಯಕರ ಗೌರವ್ ಬದುಕಿ ಬಂದದ್ದು ಹೇಗೆ? ಎನ್ನುವುದು ಇನ್ನೂ ನಿಗೂಢ. ಈಗ ಶಿವರಾಮನ ಪ್ರೇಯಸಿ ನೇಹಾ ಬದುಕಿ ಬಂದಿದ್ದಾಳೆ. ಇಷ್ಟು ದಿನ ಅವಳೆಲ್ಲಿ ಇದ್ದಳೋ?

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಕನ್ನಡತಿಗೆ ಕೃತಕತೆಯ ಭಾರ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಭುವಿ, ಹರ್ಷ ಅವರ ಮದುವೆ ಕುರಿತು ಇನ್ನೂ ಯಾವ ಯಾವ ಗೊಂದಲ ಹುಟ್ಟುಹಾಕಬೇಕೆಂದು ಉದ್ದೇಶಿಸಲಾಗಿದೆಯೋ ಗೊತ್ತಿಲ್ಲ. ಧಾರಾವಾಹಿಯಲ್ಲಿ ತಿರುವುಗಳನ್ನು ಕೃತಕವಾಗಿ ಸೃಷ್ಟಿ ಮಾಡಿ ನೋಡುಗರಲ್ಲಿ ಅನಗತ್ಯ ಕುತೂಹಲವನ್ನು ಹುಟ್ಟುಹಾಕಲು ಧಾರಾವಾಹಿ ಬಳಗ ಯತ್ನಿಸುತ್ತಿದೆ. ಆದರೆ ಇದರಿಂದ ಕಥೆಯ ಸ್ವಾರಸ್ಯವೇ ಇಲ್ಲದಂತೆ ಆಗುತ್ತಿದೆ. ಸಾನಿಯಾ, ವರು, ಅಜ್ಜಿಯ ಕುತಂತ್ರಗಳಿಗೆ ಅವಕಾಶ ಕೊಡದೆ ಮುಗಿಸಿ.

—ನಾಡಿಗ್ ರಾಮಚಂದ್ರ, ಬೆಂಗಳೂರು

## ವಾಸ್ತವಕ್ಕೆ ಸಮೀಪದ 'ಯುಗಾಂತರ'

ಸಿರಿ ಕನ್ನಡದ 'ಯುಗಾಂತರ' ಚೆನ್ನಾಗಿದೆ. ಬೇರೆ ಧಾರಾವಾಹಿಗಳ ಅಬ್ಬರ, ಥಳುಕು ಬಳುಕು, ಅಸಹಜ ನಿರೂಪಣೆಯ ಸೀರಿಯಲ್‌ಗಳ ಮುಂದೆ ಈ ಧಾರಾವಾಹಿ ವಿಭಿನ್ನ ಎನಿಸುತ್ತದೆ. ನೈಜತೆಗೆ ಹತ್ತಿರವಿರುವ, ವಾಸ್ತವದ ಅಂಶಗಳಿರುವ ಅರ್ಥಪೂರ್ಣ ಸಂಭಾಷಣೆಯ ಜೊತೆಗೆ ಕಲಾವಿದರ ಉತ್ತಮ ಅಭಿನಯವೂ ಮನಮೆಚ್ಚುವಂತಿದೆ.

—ತಾರಾ ಹೆಗಡೆ, ಶಿರಸಿ

## ಟೈಟಲ್ ಕಾರ್ಡ್ ತೋರಿಸಿ

ಮೊದಲೆಲ್ಲ ಟೀವಿ ಧಾರಾವಾಹಿಗಳ ಆರಂಭದಲ್ಲಿ ತಾರಾಗಣ, ತಾಂತ್ರಿಕ ವರ್ಗದವರ ಹೆಸರು ತೋರಿಸುತ್ತಿದ್ದರು. ಬರುಬರುತ್ತಾ ಕೇವಲ ನಿರ್ಮಾಣ ಸಂಸ್ಥೆ, ನಿರ್ದೇಶಕರ ಹೆಸರನ್ನು ಮಾತ್ರ ತೋರಿಸುತ್ತಿದ್ದಾರೆ. ಪ್ರೇಕ್ಷಕರಿಗೆ ನಟ–ನಟಿ, ತಂತ್ರಜ್ಞರ ಮಾಹಿತಿ ತಿಳಿಯುತ್ತಿಲ್ಲ. ಟೀವಿ ಆನ್ ಮಾಡಿದರೆ ಮನೆಯ ಸದಸ್ಯರಂತೆ ಕಾಣುವ ಕಲಾವಿದರು ನಮ್ಮ ಪಾಲಿಗೆ ಅನಾಮಧೇಯರೇ ಆಗಿ ಉಳಿಯುತ್ತಾರೆ. ಪತ್ರಿಕೆಗಳಲ್ಲಿ ಅವರ ಬಗ್ಗೆ ಬಂದರಷ್ಟೇ ಮಾಹಿತಿ ಸಿಗುತ್ತದೆ. ಹಾಗಾಗಿ ಪ್ರತಿ ಕಂತಿನಲ್ಲೂ ಧಾರಾವಾಹಿಯ ಟೈಟಲ್ ಕಾರ್ಡ್ ತೋರಿಸಲಿ.

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

## ಧಾರಾವಾಹಿಯಲ್ಲಿ ಎರಡೇ ವಿಧ

ಅತ್ತೆ–ಸೊಸೆ ಜಗಳ, ಅತ್ತೆಯ ಅಬ್ಬರ, ಆರ್ಭಟ. ನಾದಿನಿಯ ಕುಯುಕ್ತಿಗೆ ಕುಮ್ಮಕ್ಕು. ಕಣ್ಣೀರು ಒರೆಸಿಕೊಂಡೇ ಮೆಟ್ಟಿ ನಿಲ್ಲುವ ತ್ಯಾಗಮಯಿ ಮನೆ ಸೊಸೆ. ವಿಶೇಷ ಅತಿಥಿ ಪಾತ್ರಗಳಲ್ಲಿ ಗಂಡ ಮತ್ತು ಮಾವ.

ಆಸ್ತಿ ಕಲಹ, ತನಗೆ ಸೇರದ ಆಸ್ತಿಯ ಮೇಲೆ ಸಂಚು ಹೂಡುವ ದಾಯಾದಿಗಳು, ವಿಶೇಷವಾಗಿ ಒಬ್ಬ ಖಳನಾಯಕಿ. ಸುಪಾರಿ ಹಂತಕರಿಗೆ ಆಹ್ವಾನ. ಮಧ್ಯೆ ಅಪಹಾಸ್ಯಕ್ಕಾಗಿ ವಿದೂಷಕ ಅಡುಗೆಭಟ್ಟ.

ಈ ಎರಡು ಅಂಶಗಳ ಮೇಲೆ ಖಳನಾಯಕಿಗೆ ಜೈಲು ಶಿಕ್ಷೆಯಾಗುತ್ತದೆ ಅನ್ನುವಷ್ಟರಲ್ಲಿ ರೋಚಕ ತಿರುವು ಸಿಗುತ್ತದೆ. ಖಳನಾಯಕಿಯ ಹುನ್ನಾರದಿಂದಲೇ ನಾಯಕನ ಮಾಜಿ ಪ್ರೇಯಸಿಯ ಆಗಮನ. ಪೋಲಿಸ್ ಠಾಣೆಯ ಸನ್ನಿವೇಶಗಳಂತೂ ಗೋಜಲು ಗೊಂದಲಮಯ. ಸುಳ್ಳು ಸಾಕ್ಷಿಗಳ ಭರಾಟೆಯ ಕೋರ್ಟ್ ಕಲಾಪ. ಹಬ್ಬದ ಋತುವಾಗಿದ್ದರೆ ಆಯಾ ಹಬ್ಬಕ್ಕೆ ತಕ್ಕಂತಹ ಮೋಜು. ಧಾರಾವಾಹಿ ಎಲ್ಲಿಂದ ಶುರುವಾಯಿತು, ಎಷ್ಟು ಪಾತ್ರಧಾರಿಗಳು ಬದಲಾವಣೆಯಾದರು ಎನ್ನುವುದೇ ರಹಸ್ಯವಾಗಿ ಉಳಿಯುತ್ತದೆ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ವೀಕ್ಷಕನಿಗೆ ಹೂವೇರಿಸಬೇಡಿ

ಕಲರ್ಸ್ ಕನ್ನಡದ 'ಗೀತಾ'ದ ನಿರ್ದೇಶಕರಿಗೆ ಅವಾರ್ಡ್ ಸಲ್ಲಲೇಬೇಕು. ಭಾನುಮತಿ ಪದೇ ಪದೇ ಮಹಾತಪ್ಪುಗಳನ್ನು ಮಾಡಿದರೂ ಅವಳನ್ನು ಬಚಾವ್ ಮಾಡುವ ಅವಕಾಶವನ್ನು ಕಲ್ಪಿಸಲಾಗುತ್ತಿದೆ. ಇದು ನೋಡುಗರ ಅಸಹನೆ ಹೆಚ್ಚಿಸಿದರೂ ನೋಡಲು ಪ್ರೇರೇಪಿಸುತ್ತದೆ. ಭಾನುಮತಿಗೆ ಅಂತರರಾಜ್ಯ ಡಕಾಯಿತರನ್ನು ಕರೆತರುವ ಜಾಣ್ಮೆ, ಮಂತ್ರಿಯನ್ನೇ ಕೊಲ್ಲುವ ಚಾಣಾಕ್ಷತನ, ಮಲಮಗನ ಮೇಲಿನ ಕೃತ್ರಿಮ ಪ್ರೀತಿ ಅವನಿಗೆ ಗೊತ್ತಾಗದಂತೆ ನಡೆದುಕೊಳ್ಳುವ ಚತುರತೆ ಎಲ್ಲವೂ ಅಮೋಘ. ಇದೀಗ ಜೈಲಿನಲ್ಲಿ ಸುಪಾರಿ ನೀಡಿ ಗೀತಾಳನ್ನು ಮುಗಿಸುವ ಹುನ್ನಾರ. ವೀಕ್ಷಕರ ಕಿವಿಗೆ ಹೂ ಏರಿಸುವ ಇರಾದೆ ಬಿಟ್ಟು ಧಾರಾವಾಹಿ ಅಂತ್ಯಗೊಳಿಸಿ.

—ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

## ಮರೆಯಾದ ಹಾಸ್ಯಪ್ರಜ್ಞೆ

ಇತ್ತೀಚೆಗೆ ವೀಕ್ಷಕರನ್ನು ಸೆಳೆಯಲು ಕಾಮಿಡಿ ಎಂಬ ಹೆಸರಿನಲ್ಲಿ ಅನೇಕ ಕಾರ್ಯಕ್ರಮಗಳು ಬರುತ್ತಿವೆ. ವಿಷಾದದ ಸಂಗತಿ ಏನೆಂದರೆ, ಯಾವುದರಲ್ಲೂ ಗಟ್ಟಿಯಾದ ಹಾಸ್ಯವೇ ಇರುವುದಿಲ್ಲ. ಪುರುಷ ಸ್ತ್ರೀ ವೇಷ ಧರಿಸಿ, ಉಡುಗೆಯ ಬಗ್ಗೆ ಗಮನವೂ ಇರದಂತೆ ಮನಸೋ ಇಚ್ಛೆ ಕುಣಿಯುವುದು. ದ್ವಂದ್ವಾರ್ಥದ ಸಂಭಾಷಣೆಯೇ ಹಾಸ್ಯವೆಂದು ಭಾವಿಸಿರುವುದು ವಿಪರ್ಯಾಸ. ಅವರ ಹಾವಭಾವಗಳಿಗೆ ನಿಜವಾಗಿಯೂ ನಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ತೀರ್ಪುಗಾರರಂತೂ ಬಿದ್ದೂ ಬಿದ್ದೂ ನಗೆಯಾಡುತ್ತಿರುತ್ತಾರೆ. ಅವರನ್ನು ನೋಡುತ್ತಿರುವ ನಮಗೆ 'ಅಯ್ಯೋ ಪಾಪ' ಎಂದು ಅನಿಸುತ್ತದೆ. ಹಾಸ್ಯವು ಅಪಹಾಸ್ಯವಾಗುತ್ತಿರುವುದು ಶೋಚನೀಯ.

—ಶ್ರುತಿ ಎಸ್., ಬೆಂಗಳೂರು

## ಮೆರುಗು ತುಂಬಿದ ಸಿತಾರ್

ಸೃಜನಾತ್ಮಕ ಕಾರ್ಯಕ್ರಮಗಳ ಮೂಲಕ 'ಚಂದನ' ವಾಹಿನಿ ವೀಕ್ಷಕರ ಮನಸನ್ನು ಸೆಳೆಯುತ್ತಿದೆ. ಈಚೆಗೆ 'ವಾರದ ಅತಿಥಿ' ಕಾರ್ಯಕ್ರಮದಲ್ಲಿ 'ಖಾನ್ ಬ್ರದರ್ಸ್' ಎಂದು ಪ್ರಖ್ಯಾತರಾಗಿದ್ದ ಅಂತರರಾಷ್ಟ್ರೀಯ ಸಿತಾರ್ ವಾದಕ ಉಸ್ತಾದ್ ಹಫೀಸ್ ಖಾನ್ (ಪ್ರಖ್ಯಾತ ಸಿತಾರ್ ವಾದಕ ಬಾಲೆಖಾನ್ ಪುತ್ರ) ಅವರ ಸಿತಾರ್ ವಾದನ ತುಂಬ ಚೆನ್ನಾಗಿತ್ತು.

ಸಿತಾರ್ ಜೊತೆಗಿನ ಪಯಣದ ಬಗ್ಗೆ ಅವರು ಆಡಿದ ಮಾತುಕತೆಗಳು ನಮ್ಮೆಲ್ಲರ ಮನಮುಟ್ಟುವಂತಿದ್ದವು. ಶ್ರೀನಿವಾಸ್ ಜೋಶಿ ರಚನೆಯ 'ನರಜನ್ಮ ಬಂದಾಗ...' ಹಾಡನ್ನು ಸಿತಾರ್ ನುಡಿಸಿಕೊಂಡು ಹಾಡಿದ್ದು ಸೊಗಸಾಗಿತ್ತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ನಿರೂಪಣೆಯ ಅರುಚಿ

ಕಲರ್ಸ್ ಕನ್ನಡದ 'ಸವಿರುಚಿ' ನಿರೂಪಣೆಯ ಅಭಿರುಚಿ ಉತ್ತಮವಾದುದಲ್ಲ. ಖಾಲಿ ಬಿಂದಿಗೆಯಲ್ಲಿ ಕಲ್ಲುಗಳನ್ನು ಹಾಕಿ ಅಲ್ಲಾಡಿಸುತ್ತಿರುವಂತಿದೆ. ಶಬ್ದ ಮಾಲಿನ್ಯದಿಂದ ಕಾರ್ಯಕ್ರಮದ ರುಚಿ ಕೆಡುತ್ತಿದೆ.

ಒಂದು ಗಂಟೆಯ ಈ ಕಾರ್ಯಕ್ರಮದುದ್ದಕ್ಕೂ ಅನವಶ್ಯಕ ಕೂಗಾಟ–ನಾಟಕೀಯ ನಿರೂಪಣೆ. ಅಡುಗೆಯ ರುಚಿ ನೋಡುವಾಗ ಬೆರಳು ಚೀಪುವುದು ಸರಿಯೆ?

—ಸಿಹಿಮೊಗೆ ರಮೇಶ್, ಮೈಸೂರು